**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 395 |
| 2 | ಸದಸ್ಯರ ಹೆಸರು | : | ಶ್ರೀ ನಸೀರ್ ಅಹ್ಮದ್ |
| 3 | ಉತ್ತರಿಸುವ ದಿನಾಂಕ | : | 15-09-2022 |
| 4 | ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡುವ ವಾರ್ಡ್ ನಂಬರ್ 24 ರಲ್ಲಿನ ಹೆಚ್.ಬಿ.ಆರ್. ಲೇಔಟ್ 2ನೇ ಬ್ಲಾಕ್ 1ನೇ ಹಂತದ 7ನೇ ಮುಖ್ಯರಸ್ತೆಯಲ್ಲಿನ (Infant Jesus school road) ಎರಡು ಬದಿಯ ಸಣ್ಣ ಮೋರಿಗಳು ಸಂಪೂರ್ಣವಾಗಿ ಮುಚ್ಚಿಹೋಗಿರುವುದರಿಂದ ಮಳೆಗಾಲದ ಈ ಸಮಯದಲ್ಲಿ ಸರಾಗವಾಗಿ ನೀರು ಹರಿದು ದೊಡ್ಡ ಮೋರಿಗೆ ಸೇರದೆ ರಸ್ತೆಗಳಲ್ಲೇ ನೀರು ತುಂಬಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ | ಹಾಗಿದ್ದಲ್ಲಿ, ಸದರಿ ಸಣ್ಣ ಮೋರಿಗಳನ್ನು ಸ್ವಚ್ಛಗೊಳಿಸಲು ಸರ್ಕಾರ ಕ್ರಮಕೈಗೊಳ್ಳುವುದೇ; | ಪಾಲಿಕೆಯ ವಾರ್ಡ್ ಸಂಖ್ಯೆ: 24ರಲ್ಲಿನ ಹೆಚ್.ಬಿ.ಆರ್. ಲೇಔಟ್, 2ನೇ ಬ್ಲಾಕ್ 1ನೇ ಹಂತದ 7ನೇ ಮುಖ್ಯರಸ್ತೆಯಲ್ಲಿನ (Infant Jesus School Road) ಎರಡೂ ಬದಿಯಲ್ಲಿನ ಸಣ್ಣ ಮೋರಿಗಳಲ್ಲಿ ತುಂಬಿದ್ದ ಹೂಳನ್ನು 2021-22ನೇ ಸಾಲಿನ ಪಿ.ಓ.ಡಬ್ಲ್ಯೂ ಯೋಜನೆಯಡಿಯಲ್ಲಿ ರೂ.7.77 ಲಕ್ಷಗಳಿಗೆ ಕಾಮಗಾರಿಯನ್ನು ಕೈಗೆತ್ತಿಕೊಂಡು ಚರಂಡಿಗಳಲ್ಲಿ ತುಂಬಿದ್ದ ಹೂಳನ್ನು ಸಂಪೂರ್ಣವಾಗಿ ತೆಗೆಯಲಾಗಿದೆ ಹಾಗೂ ರಸ್ತೆ ಬದಿಯ ಚರಂಡಿಗೆ ಹೊಂದಿಕೊಂಡಂತೆ ಇದ್ದ ಎರಡೂ ಮೋರಿಗಳನ್ನು ಸಹ ಮರು ನಿರ್ಮಿಸಿ ತುಂಬಿದ್ದ ಹೂಳನ್ನು ತೆಗೆಯಲಾಗಿದ್ದು, ಮಳೆ ನೀರು ಸರಾಗವಾಗಿ ಹರಿದು ಮಳೆನೀರು ಕಾಲುವೆಗೆ ಹೋಗುವಂತೆ ಮಾಡಲಾಗಿರುತ್ತದೆ. |
| ಇ | ಸದರಿ 7ನೇ ಮುಖ್ಯರಸ್ತೆಯ (Infant Jesus school road) ಅಕ್ಕಪಕ್ಕದಲ್ಲಿರುವ ಮರಗಳ ಕೊಂಬೆಗಳು ಅಡ್ಡಾದಿಡ್ಡಿಯಾಗಿ ಬೆಳೆದು ಸಂಪೂರ್ಣ ರಸ್ತೆಗೆ ಬಾಗಿಕೊಂಡು, ಯಾವುದೇ ಸಮಯದಲ್ಲಿ ರಸ್ತೆಯ ಮೇಲೆ ಓಡಾಡುವ ಜನರ ಮೇಲೆ ಹಾಗೂ ಬೆಸ್ಕಾಂರವರ ವಿದ್ಯುತ್ ಲೈನ್ ಮೇಲೆ ಬೀಳುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಸದರಿ ಸ್ಥಳವನ್ನು ಪರಿಶೀಲಿಸಿ, ದಿನಾಂಕ: 12-09-2022 ರಂದು ಅಂತಹ ಮರಗಳ ರೆಂಬೆ-ಕೊಂಬೆಗಳನ್ನು ತೆರವುಗೊಳಿಸಲಾಗಿರುತ್ತದೆ. |
| ಈ | ಹಾಗಿದ್ದಲ್ಲಿ, ಅಪಾಯಕಾರಿಯಾಗಿ ಅಡ್ಡಾದಿಡ್ಡಿಯಾಗಿ ಬೆಳೆದ ಮರಗಳ ಕೊಂಬೆಗಳನ್ನು ಕತ್ತರಿಸಲು ಸರ್ಕಾರ ಕ್ರಮಕೈಗೊಳ್ಳುವುದೇ? | |

**ಸಂಖ್ಯೆ: ನಅಇ 132 ಬಿಬಿಎಸ್ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ.